ನಂ.1 ವಿಜಯವಾಣಿ ಕನ್ನಡ ದಿನಪತ್ರಿಕೆ
ಶನಿವಾರ | 23 ಡಿಸೆಂಬರ್ | 2017
VIJAYAVANI ▪ 23 DECEMBER 2017

# ತೆಂಗಿಗೆ ಬಿಳಿಕೀಟ ಬಾಧೆ ಆತಂಕಪಡುವ ಅಗತ್ಯವಿಲ್ಲ

## ಸಿಪಿಸಿಆರ್ಐನಿಂದ ನೈಸರ್ಗಿಕ ಪರಿಹಾರೋಪಾಯ | ಮಿತ್ರ ಕೀಟಗಳ ಮೂಲಕ ನಿಯಂತ್ರಣ ಸಾಧ್ಯ

▪ ವಿಜಯವಾಣಿ ಸುದ್ದಿಜಾಲ ಕಾಸರಗೋಡು

ನಾನಾ ಕಡೆ ತೆಂಗಿನ ಕೃಷಿಯನ್ನು ಬಾಧಿಸುವ ಬಿಳಿ ಕೀಟಗಳ (ರುಗೋಸ್ ಸ್ಪೈರಲಿಂಗ್ ವೈಟ್ ಫ್ಲೈ) ಹಾವಳಿ ಕೃಷಿಕರನ್ನು ಕಂಗಾಲಾಗಿಸಿದ್ದು, ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರ(ಸಿಪಿಸಿಆರ್ಐ) ಇದಕ್ಕೆ ನೈಸರ್ಗಿಕ ಪರಿಹಾರೋಪಾಯ ಕಂಡುಕೊಂಡಿದೆ.

**ನಿಯಂತ್ರಣ ಹೇಗೆ?:** ಬಿಳಿ ಕೀಟ(ರುಗೋಸ್ ಸ್ಪೈರಲಿಂಗ್ ವೈಟ್ ಫ್ಲೈ)ಗಳ ಬಗ್ಗೆ ಕೃಷಿಕರು ಆತಂಕ ಪಡಬೇಕಾಗಿಲ್ಲ ಎಂದು ಸಿಪಿಸಿಆರ್ಐ ವಿಜ್ಞಾನಿಗಳು ತಿಳಿಸಿದ್ದಾರೆ. ತೆಂಗಿನ ಗರಿಗಳಲ್ಲಿ ನೈಸರ್ಗಿಕವಾಗಿ ಬ್ಲ್ಯಾಕ್ ಫಂಗಸ್ ಆಗುತ್ತಿದ್ದು, ಇವುಗಳು ಕೀಟಗಳನ್ನು ನಿಯಂತ್ರಿಸುತ್ತವೆ. ರಾಸಾಯನಿಕ, ಜೈವಿಕ ಕೀಟನಾಶಕಗಳ ಬಳಕೆ ಬದಲು ಮಿತ್ರ ಕೀಟಗಳ ಮೂಲಕವೂ ಇದರ ನಿಯಂತ್ರಣ ಸಾಧ್ಯ. ಈಗಾಗಲೇ ಸಿಪಿಸಿಆರ್ಐ ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸುತ್ತಿದ್ದು, ಬಿಳಿ ಕೀಟಗಳನ್ನು ನೈಸರ್ಗಿಕವಾಗಿ ಹತೋಟಿಗೆ ತರಲು ಕ್ರಮ ಕೈಗೊಳ್ಳುತ್ತಿದೆ.

ತೆಂಗಿನ ಗರಿಗಳಿಗೆ ನಿರಂತರ ನೀರು ಸಿಂಪಡಿಸುವಿಕೆ ಕೀಟ ನಿಯಂತ್ರಣಕ್ಕೆ ಸಹಕಾರಿ. ಸಿಪಿಸಿಆರ್ಐ ವ್ಯಾಪ್ತಿಯಲ್ಲಿರುವ ತೆಂಗಿನ ತೋಟಗಳಲ್ಲಿ ನಿರಂತರ ಸ್ಪ್ರಿಂಕ್ಲರ್ ಮೂಲಕ ನೀರು ಹಾಯಿಸುತ್ತಿರುವ ತೋಟಕ್ಕೆ ಬಿಳಿ ಕೀಟ ರೋಗ ಅಷ್ಟಾಗಿ ಬಾಧಿಸಿಲ್ಲ. ತೆಂಗಿನ ಗರಿಗಳು ಬಿಳಿ ಬಣ್ಣಕ್ಕೆ ತಿರುಗುವುದು, ಎಳೆಯ ಗರಿಗಳ ಸಹಿತ ತಿರಿ ಕರಟುವುದು ಬಿಳಿಕೀಟ ಬಾಧೆಯ ಸಾಮಾನ್ಯ ಲಕ್ಷಣಗಳು. ಬಿಳಿ ಕೀಟ ಬಾಧೆಯಿಂದ ತೆಂಗಿನ ಇಳುವರಿ ಕಡಿಮೆಯಾಗಿರುವ ಉದಾಹರಣೆಗಳಿಲ್ಲ ಎಂದೂ ವಿಜ್ಞಾನಿಗಳು ತಿಳಿಸಿದ್ದಾರೆ.


ವಿಜಯವಾಣಿ ಚಿತ್ರ

ತೆಂಗಿನಗರಿ ಹಾನಿಗೊಳಿಸುವ ಬಿಳಿಕೀಟ

### ಹೀಗಿದೆ ವಂಶಾಭಿವೃದ್ಧಿ

ತೆಂಗಿನ ಗರಿ ಅಥವಾ ಬಾಳೆ ಎಲೆಯ ತಳಭಾಗದಲ್ಲಿ 10ರಿಂದ 20ರಷ್ಟು ಅಂಡಾಕಾರದ ಮೊಟ್ಟೆಗಳನ್ನಿರಿಸುವ ಈ ಕೀಟ ಇದರ ಸುತ್ತು ಪೊರೆ ರಚಿಸಿಕೊಂಡು ವಂಶಾಭಿವೃದ್ಧಿ ಮಾಡುತ್ತದೆ. ಈ ಕೀಟಗಳ ಮೈಯಿಂದ ಹೊರಬರುವ ದ್ರಾವಣ ತೆಂಗಿನ ಗರಿ ಕರಟುವಂತೆ ಮಾಡುತ್ತದೆ. ಇದು ಕ್ರಮೇಣ ಇತರ ಗರಿಗಳಿಗೂ ವ್ಯಾಪಿಸುತ್ತದೆ. ತೆಂಗಿನ ಸಸಿ, ಬಾಳೆ ಸಸಿಗಳನ್ನು ಒಂದೆಡೆಯಿಂದ ಇನ್ನೊಂದೆಡೆ ಸಾಗಿಸುವ ಮೂಲಕವೂ ಕೀಟಗಳು ಇತರ ಕಡೆ ವ್ಯಾಪಿಸುತ್ತಿದೆ.



2016ರಿಂದ ಬಿಳಿ ಕೀಟ (ರುಗೋಸ್ ಸ್ಪೈರಲಿಂಗ್ ವೈಟ್ ಫ್ಲೈ) ಹಾವಳಿ ಕೇರಳದಲ್ಲಿ ಕಂಡು ಬರಲಾರಂಭಿಸಿದ್ದು, ನೈಸರ್ಗಿಕವಾಗಿ ಇದರ ನಿಯಂತ್ರಣ ಸಾಧ್ಯವಾಗುತ್ತಿದೆ. ಕಾಸರಗೋಡು ಸಿಪಿಸಿಆರ್ಐನಲ್ಲಿ ಕಾಣಿಸಿಕೊಂಡಿರುವ ಬಿಳಿ ಕೀಟ ಹಾವಳಿ ಗಣನೀಯವಾಗಿ ಕಡಿಮೆಯಾಗಿದೆ. ತಲಪಾಡಿ, ಉಳ್ಳಾಲ ಸಹಿತ ದ.ಕ ಜಿಲ್ಲಾ ವ್ಯಾಪ್ತಿಯಲ್ಲಿ ಬಿಳಿ ಕೀಟ ಜತೆಗೆ ಇತರ ರೋಗಬಾಧೆ ತಗಲಿರುವ ಸಾಧ್ಯತೆಯಿದ್ದು, ಈ ಬಗ್ಗೆ ಮಂಗಳೂರು, ಉಡುಪಿಯ ಕೆ.ವಿ.ಕೆ ಹಾಗೂ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

| ಡಾ.ಪಿ.ಚೌಡಪ್ಪ
ನಿರ್ದೇಶಕರು, ಸಿಪಿಸಿಆರ್ಐ, ಕಾಸರಗೋಡು